**CC 1313/2018**
**PW - 1**

**ಸಾಕ್ಷಿಯು ದಿನಾಂಕಃ 29-08-2025 ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ವಿ ಬಿ., ವಕೀಲರಿಂದ**

ಆರೋಪಿ ನನ್ನ ಗಂಡ ಅಂದರೆ ಸರಿ. ದಿಃ 26-07-2007 ರಂದು ನಮ್ಮ ಮದುವೆ ಹೊಸಪೇಟೆಯಲ್ಲಿ ಆಗಿತ್ತು ಅಂದರೆ ಸರಿ. ಮದುವೆಯಾದ ನಂತರ ನಾನು 8 ವರ್ಷಗಳ ಕಾಲ ಆರೋಪಿಯೊಂದಿಗೆ ಸಂಸಾರ ಮಾಡಿರುತ್ತೇನೆ ಅಂದರೆ ಸರಿ. ನನಗೆ ಮತ್ತು ಆರೋಪಿಗೆ ಇಬ್ಬರು ಮಕ್ಕಳು ಇರುತ್ತಾರೆ ಅಂದರೆ ಸರಿ. ಆರೋಪಿ ನಾನು ಆತನೊಂದಿಗೆ ಇದ್ದಾಗ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದ ಅಂದರೆ ಸರಿ. ನನಗೂ ಮತ್ತು ಆರೋಪಿಗೂ ಚಿಕ್ಕ ಪುಟ್ಟ ವೈವಾಹಿಕ ವ್ಯತ್ಯಾಸಗಳು ಇದ್ದವು ಅಂದರೆ ಸರಿ. ಆರೋಪಿ ನನಗೆ ಹೊಡೆ ಬಡೆ ಮಾಡಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಅಂದರೆ ಸರಿ. ನಾನು ಆರೋಪಿಯೊಂದಿಗೆ ಇದ್ದಾಗ ನಮ್ಮಿಬ್ಬರ ಮಧ್ಯೆ ವರದಕ್ಷಿಣೆ ವಿಚಾರವಾಗಿ ಯಾವುದೇ ಕಲಹ ಆಗಿರಲಿಲ್ಲ ಅಂದರೆ ಸರಿ.

ನಿಪಿಃ 1 ನ್ನು ನಾನು ನನ್ನ ವಕೀಲರಿಗೆ ನನ್ನ ಮತ್ತು ಆರೋಪಿಯ ಮಧ್ಯೆ ಸಣ್ಣ ಪುಟ್ಟ ವೈವಾಹಿಕ ವ್ಯತ್ಯಾಸಗಳು ಆಗಿವೆ ಎಂದು ಹೇಳಿದಾಗ ಬರೆಸಿರುತ್ತಾರೆ ಅಂದರೆ ಸರಿ. ನಿಪಿಃ 1 ನ್ನು ನಾನು ಓದಿ ನೋಡಿಲ್ಲ ಅಂದರೆ ಸರಿ. ನಾನು ಮತ್ತು ಆರೋಪಿ ಅದಾದ ನಂತರ ನಮ್ಮ ವ್ಯತ್ಯಾಸಗಳನ್ನು ಮರೆತು ರಾಜಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ಈ ಹಿಂದೆ ನಾನು ಸಾಕ್ಷ ನುಡಿಯುವಾಗ ಭಾವೋದ್ವೇಗಕ್ಕೆ ಒಳಗಾಗಿ, ನಿಪಿಃ 1 ರಂತೆ ದೂರು ನೀಡಿದ್ದ ಎಂದು ಹೇಳಿರುತ್ತೇನೆ ಅಂದರೆ ಸರಿ. ಆರೋಪಿ ನಿಪಿಃ 1 ರಲ್ಲಿ ಹೇಳಿರುವಂತೆ ಯಾವುದೇ ಕೃತ್ಯ ಎಸಗಿಲ್ಲ ಅಂದರೆ ಸರಿ.

ಪೋಲಿಸರು ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಸದರಿ ಪಂಚನಾಮೆಗಳನ್ನು ಯಾವ ಕಾರಣಕ್ಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.

ನನಗೂ ಮತ್ತು ಆರೋಪಿಗೂ ಈಗ ಯಾವುದೇ ವ್ಯತ್ಯಾಸಗಳು ಇಲ್ಲದ್ದರಿಂದ ನಾನು ಪ್ರಕರಣ ನಡೆಸಲು ಇಚ್ಛಿಸಿರುವುದಿಲ್ಲ ಅಂದರೆ ಸರಿ.

**ಮರುವಿಚಾರಣೆಃ ಮಾನ್ಯ ಸ. ಸ. ಅ. ರವರಿಂದ**

ನಾನು ಈ ಹಿಂದೆ ಆರೋಪಿಯ ವಿರುದ್ಧ ಸಾಕ್ಷ ನುಡಿದಿರುತ್ತೇನೆ ಅಂದರೆ ಸರಿ. ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ರಾಜಿ ಮಾಡಿಕೊಂಡ ಕಾರಣ ನನ್ನ ಪಾಟೀ ಸವಾಲಿನಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.